**ANSWER KEY - 2 (ಉತ್ತರಪತ್ರಿಕೆ)**

October 2026 Grade : IX

Time: 3 Hours. Subject : Kannada ( 1009)

---

*** ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ ಒಂದನ್ನು ಆರಿಸಿ. ವಾಕ್ಯ ಪೂರ್ಣ ಮಾಡಿ ಬರೆಯಿರಿ. (1x2=2)**

1. ಮಹಾದೇವನು ______ ಹಾಸಿಗೆ ಹಿಡಿದನು
   - ಕಾಯಿಲೆಯಿಂದ
2. ರಾಣಿ ಅಹಲ್ಯಾಬಾಯಿಯವರು ಬಡವರ ಪಾಲಿಗೆ ______ ಆಗಿದ್ದರು.
   - ಭಾಗ್ಯಲಕ್ಷ್ಮಿ

*** ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು/ ಕೇಳಿದರು. (1x4=4)**

3. ಈ ಮಾತನ್ನು ಕೃಷ್ಣನು ರಾಧಾಳಿಗೆ ಹೇಳಿದನು .
4. ಈ ಮಾತನ್ನು ಅಜಯನು ಅಮರನಿಗೆ ಹೇಳಿದನು.
5. ಈ ಮಾತನ್ನು ಎರಡನೆಯ ಯಾತ್ರಿಕನು ತನ್ನಸಹ ಯಾತ್ರಿಕರಿಗೆ ಹೇಳಿದನು.
6. ಈ ಮಾತನ್ನು ಭಗವಾನ್ ಬುದ್ದನು ವೃದ್ಧೆಗೆ ಹೇಳಿದರು.

* **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

7. ಜಾಲಗಾರ ಹಕ್ಕಿಗೆ ಇರುವ ಇನ್ನೊಂದು ಹೆಸರು ಕಿಂಗ್ ಫಿಷರ್ . 1
8. ಭಗವಾನ್ ಬುದ್ದರು ಶಾಶ್ವತವಾದ ಸತ್ಯ ಮತ್ತು ಆನಂದಗಳ ಅನ್ವೇಷಣೆಗೆ ಧೀರ್ಘ ಯಾತ್ರೆಯನ್ನು ಕೈಕೊಂಡರು. 1
9. ಪ್ರವಾಸಿಗರು ಬಸ್ಸಿನಲ್ಲಿ ಇಂಧನ ಇಲ್ಲವೇ ಸ್ಫೋಟಕ ವಸ್ತುಗಳನ್ನು ಸಾಗಿಸುವದನ್ನು ನಿಷೇಧಿಸಲಾಗಿದೆ. 1
10. ಶಿಂಧೆ ಛತ್ರಿಯಲ್ಲಿ ಮಹದೋಜಿ ಶಿಂಧೆಯವರ ಸಮಾಧಿಯಿದೆ. 1
11. ಮನುಷ್ಯನಿಗೆ ಹಣದಿಂದ ಸಮಾಧಾನ ಮತ್ತು ನೆಮ್ಮದಿಗಳು ದೊರಕುವದಿಲ್ಲ . ದುಡಿಮೆ ಮತ್ತು ನಡತೆಗಳಿಂದ ಸಮಾಧಾನ ಸಿಗುತ್ತದೆ ಎಂಬ ಅರಿವು ಮೂಡಿತು. 1

***ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ ಉತ್ತರವನ್ನು ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

12. . ಪುಣೆಯಲ್ಲಿ ________ ಎಂಬ ಹೆಸರಿನ ಅತ್ಯಂತ ರಮಣೀಯ ಬೆಟ್ಟವಿದೆ. 1

- ಪರ್ವತಿ

13. ನನ್ನಲ್ಲಿ ಪ್ರವಾಸಿಗರು __________ ಪ್ರವಾಸ ಮಾಡುವಂತಿಲ್ಲ. 1

- ಟಿಕೇಟುರಹಿತ

*** ಕೆಳಗಿನ ಬೇಕಾದ ಮೂರು ಪ್ರಶ್ನೆಗಳಿಗೆ ೧೫ ರಿಂದ ೨೦ ಶಬ್ದಗಳಲ್ಲಿ ಉತ್ತರ ಬರೆಯಿರಿ.**

**(3x3=9)**

14. ಸಮಯೋಚಿತ ಹಾಗೂ ಸುರಕ್ಷಿತ ಪ್ರವಾಸಕ್ಕೆ ಹೆಸರುವಾಸಿಯಾದ ನಮ್ಮ ಕುಲದ ಗೌರವವನ್ನು ಕಾಪಾಡಿಕೊಂಡೆ ಎಂಬ ನೆಮ್ಮದಿ ನನಗಿದೆ. ಸೇವೆಯಲ್ಲಿ ಇರುವಷ್ಟು ಕಾಲ ಜನರ , ಸಂಸ್ಥೆಯ ಹಾಗೂ ಸರಕಾರದ ಕಣ್ಮಣಿಯಾಗಿ ಕಾಲ ಕಳೆದೆನಲ್ಲಾ! ಇದು ತನ್ನ ಭಾಗ್ಯವೆಂದು ಬಸ್ಸು ಹೇಳುತ್ತದೆ.

15. ಅಹಲ್ಯಾಬಾಯಿಯವರಿಗೆ ಚಿಕ್ಕಂದಿನಿಂದಲ್ಲಿ ರಾಜ – ರಾಣಿಯರ ಕಥೆಗಳು , ಯುದ್ಧ ಪ್ರಸಂಗಗಳು, ಕುದರೆ ಸವಾರಿ ಮುಂತಾದ ವಿಷಯಗಳನ್ನು ಕೇಳುವ ಕುತೂಹಲವಿತ್ತು. ಗುರು – ಹಿರಿಯಲ್ಲಿ ಭಕ್ತಿ, ಲಿಂಗ ಪೂಜೆಯಲ್ಲಿ ತಲ್ಲೀನತೆ ಇವು ಪ್ರಮುಖ ಹವ್ಯಾಸಗಳಾಗಿದ್ದವು.

16. ಮಹಾಬಯಲು ದಾಟುವಾಗ ಉಂಟಾದ ಆತಂಕ ಏನೆಂದರೆ ದಾರಿಯಲ್ಲಿ ಹಳ್ಳಿಗಳಾಗಲೀ, ಮನೆಗಳಾಗಲೀ, ಛತ್ರವಾಗಲೀ ಯಾವುದು ಕಾಣುತ್ತಿರಲಿಲ್ಲ. ಜನ ಸಂಚಾರವಿರದ ಮಹಾಬಯಲು. ಆ ವಾರ ಮುಗಿಯುವದರೊಳಗಾಗಿ , ಎಲ್ಲರ ಊಟದ ಚೀಲ ಖಾಲಿ . ಒಬ್ಬನ ಚೀಲದಲ್ಲಿ ಒಂದು ತುಂಡು ಬ್ರೆಡ್ ಮತ್ತು ಸ್ವಲ್ಪ ಕುಡಿಯುವ ನೀರು ಉಳಿದಿತ್ತು. ಬಯಲು ದಾಟಲು ಒಂದೆರಡು ದಿನಗಳಾದರೂ ಬೇಕು . ಎಲ್ಲರಿಗು ತಡೆಯಲಾರದ ಹಸಿವು ಮತ್ತು ಭಾರಿ ಆಯಾಸ . ಎಲ್ಲರ ಕಣ್ಣು ಬ್ರೆಡ್ಡಿನ ಮೇಲೆ . ಆದರೆ ಅದು ಒಬ್ಬನ ತುಂಬಿಸಲಾರದಷ್ಟು ಸಣ್ಣದು.

17. ವಿಶ್ರಮಬಾಗವಾಡಾ ಭವ್ಯವಾದ ದ್ವಾರದ ಮೂರೂ ಮಹಡಿಯ ಕಟ್ಟಡ. ಇದು ಪುಣೆಯ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆ ಕಥೆಯನ್ನು ಹೇಳುತ್ತದೆ.

* **ಈ ಕೆಳಗಿನ <u>ಬೇಕಾದ ಒಂದು ಪ್ರಶ್ನೆಗೆ</u> ೨೫ ರಿಂದ ೩೦ ಶಬ್ದಗಳಲ್ಲಿ ಉತ್ತರ ಬರೆಯಿರಿ.**

**(4x1=4)**

**18.** ಈ ಹಣವನ್ನು ಒಂದು ಶಿಕ್ಷಣ ಸಂಸ್ಥೆಗೆ ದಾನ ಕೊಡುವದು. ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಮಗು ಡಾ. ವಿಶ್ವೇಶ್ವರಯ್ಯರಂತಹ ಶ್ರೇಷ್ಠ ಇಂಜಿನಿಯರನಾದರೆ ನಮ್ಮ ನಾಡು ಸುಜಲಾಂ ಸಫಲಾಂ ಆಗಬಹುದು. ಸರ್. ಸಿ. ವ್ಹಿ. ರಾಮನರಂತಹ ಶ್ರೇಷ್ಠ ವಿಜ್ಞಾನಿಯಾದರೆ ನಮ್ಮ ದೇಶ ಜಗತ್ತಿನಲ್ಲಿ ಕೀರ್ತಿ ಪಡೆಯಬಹುದು ಎಂದನು. ಪತಿಯ ಅತ್ಯುತ್ತಮ ವಿಚಾರಗಳನ್ನು ಕೇಳಿದ ರಾಧಾ ಅಚ್ಚರಿಗೊಂಡಳು.

**19.** ಜಿಂಕೆಯನ್ನು ಕಂಡು ಸಿದ್ಧಾರ್ಥನ ಮನ ಪರಿವರ್ತನೆಯಾಯಿತು . ಆತನಿಗೆ ಜಿಂಕೆಯನ್ನು ಕಂಡು ಕನಿಕರ ಹುಟ್ಟಿತು. ಮೃದುವಾದ ದೇಹ , ಅದರ ಕಂಗಳ ಕಾಂತಿ ಕಂಡು ಸಿದ್ಧಾರ್ಥನ ಮನ ಕರಗಿತು. ಇಂತಹ ಸುಂದರವಾದ ಪ್ರಾಣಿಯನ್ನು ಕೊಲ್ಲುವದು ಸರಿಯೇ ? ಎಂದೆನಿಸಿತು .

* **ಈ ಕೆಳಗಿನ ಕವಿತೆಯ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

**(1x4=4)**

**20.** ಗಿಳಿಗಳು ಕೂಸಿಗೆ ನೀನು ಯಾರ ಮಗನೆಂದು ಕೇಳಿದವು .

**21.** ಚಹಾ , ಕಾಫಿ ಮಿತವಾಗಿರಬೇಕು .

**22.** ಶ್ರೀಗಂಧದ ಸುಗಂಧದ ಕಂಪು ಬೆಂದ ಹೃದಯಕ್ಕೆ ತಂಪು ಅನಿಸುವದು .

**23.** ದೊರಕದ ವಸ್ತುವನೆಂದಿಗೂ ಬಯಸದೆ , ಇದ್ದುದರಲ್ಲಿಯೇ ತೃಪ್ತಿ ಪಟ್ಟು ಬಾಳಿದರೆ ಬಾಳಿನ ಸೊಗವು ಹೆಚ್ಚುವದು..

* **ಈ ಕೆಳಗಿನ ಪ್ರಶ್ನೆಗಳಿಗೆ ೧೦ ರಿಂದ ೧೫ ಶಬ್ದಗಳಲ್ಲಿ ಉತ್ತರ ಬರೆಯಿರಿ.** **( 2x3 = 6)**

24. ಯೋಗದಿಂದ ದೇಹದ ಕಾಂತಿ ಹೆಚ್ಚುವದು ಮತ್ತು ಆರೋಗ್ಯವು ಚೆನ್ನಾಗಿರುವದು.

25. ಹಂಪೆ , ಐಹೊಳೆ , ಬಿಜಾಪುರ ಇವು ಸಾಹಿತ್ಯ ಶಿಲ್ಪಕಲೆಗಳ ತವರೂರು.

26. ಗಿಳಿಗಳು ಮಗುವಿಗೆ ನೀನು ಯಾರ ಮಗನೆಂದು ಕೇಳುವವು .

27. 'ಬಾಣಸಿಗ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** **(1)**

- ಅಡುಗೆ ಕೆಲಸ ಮಾಡುವವ

**28.** 'ಕಾಂತಿ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** (1)

- ಬೆಳಕು

* **ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣ ಶಬ್ದಗಳನ್ನು ಗುರುತಿಸಿ ಬರೆಯಿರಿ.**

29. ರಂಗಾನಾಥನು ಅಂಗಡಿಯಿಂದ ಬಂಗಾರವನ್ನು ತಂದನು. (1)

- ಬಂಗಾರವನ್ನು

30. ಮಳೆಗಾಲದಲ್ಲಿ ಸುಂದರವಾದ ಕಾಮನಬಿಲ್ಲು ಮೂಡಿಬಂದಿತ್ತು. (1)

- ಸುಂದರ

31. 'ಮಗುವನ್ನು' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪ.** (1)

- ಮಗು + ಅನ್ನು

32. 'ರಾಜೇಂದ್ರ' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪ.** (1)

- ರಾಜ + ಇಂದ್ರ

33. 'ಮಾಂತ್ರಿಕ' **ಈ ಶಬ್ದದ ಬಹುವಚನ ರೂಪ.** (1)

- ಮಾಂತ್ರಿಕರು

34. 'ಆಕಳುಗಳು' **ಈ ಶಬ್ದದ ಏಕವಚನ ರೂಪ.** (1)

- ಆಕಳು

35. 'ಸೇವಕ' **ಈ ಶಬ್ದದ ಸ್ತ್ರೀಲಿಂಗ ರೂಪ.** (1)

- ಸೇವಕಿ

36. 'ವೈಧ್ಯೆ' **ಈ ಶಬ್ದದ ಪುಲ್ಲಿಂಗ ರೂಪ.** (1)

- ವೈದ್ಯ

37. 'ಜನನ' **ಈ ಶಬ್ದದ ವಿರುದ್ಧಾರ್ಥಕ ಶಬ್ದ.** (1)

- ಮರಣ

38. 'ಸರಳ' **ಈ ಶಬ್ದದ ವಿರುದ್ಧಾರ್ಥಕ ಶಬ್ದ.** (1)

- ಕಠಿಣ

39. 'ನಾರಿ' **ಈ ಶಬ್ದದ ಸಮನಾರ್ಥಕ ಶಬ್ದ.** (1)

- ಹೆಣ್ಣು

40. 'ಪುಷ್ಪ' **ಈ ಶಬ್ದದ ಸಮನಾರ್ಥಕ ಶಬ್ದ.** (1)

- ಹೂವು

* **ಈ ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.** (2)

41. ಕನಿಕರ

ಮಳೆಯಲ್ಲಿ ಒಬ್ಬ ವೃದ್ಧನು ನೆನೆಯುತ್ತಿರುವದನ್ನು ಕಂಡು ಕನಿಕರ ಉಂಟಾಯಿತು.

42. ಸುರಂಗ

ರೈಲು ಗಾಡಿಯು ಪರ್ವತದ ಸುರಂಗ ಮಾರ್ಗವಾಗಿ ಹೋಗುವ ದೃಶ್ಯ ನೋಡಲು ಅದ್ಭುತವಾಗಿರುತ್ತದೆ.

* **ಈ ಕೆಳಗಿನ ಬೇಕಾದ ಎರಡು ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ.** (1X2=2)

43. ತಾಳಿದವನು ಬಾಳಿಯಾನು.

ಕಷ್ಟ, ನೋವು ಮತ್ತು ಸಂಕಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಂಡು ಮುನ್ನಡೆಯುವವನು ಜೀವನದಲ್ಲಿ ಯಶಸ್ಸು ಮತ್ತು ಸುಖವನ್ನು ಪಡೆಯುತ್ತಾನೆ. ಅಂದರೆ ತಾಳ್ಮೆಯಿಂದ ಇದ್ದರೆ ಒಳ್ಳೆಯ ಫಲ ಸಿಗುತ್ತದೆ.

44. ಅತಿ ಆಸೆಗತಿ ಗೇಡು.

ಅತಿಯಾಸೆ ಹೊಂದಿದರೆ ನಮ್ಮಲ್ಲಿರುವದನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಆದ್ದರಿಂದ ಮನುಷ್ಯನು ತನ್ನ ಆಸೆಗಳಿಗೆ ಮಿತಿ ಇಟ್ಟುಕೊಂಡು ತೃಪ್ತಿಯಿಂದ ಬದುಕಬೇಕು.

45. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

ವ್ಯಕ್ತಿ ಗಾತ್ರದಲ್ಲಿ ಅಥವಾ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ, ತನ್ನ ಪ್ರತಿಭೆ, ಸಾಧನೆ ಮತ್ತು ಒಳ್ಳೆಯ ಕೆಲಸಗಳಿಂದ ದೊಡ್ಡ ಕೀರ್ತಿಯನ್ನು ಗಳಿಸಬಹುದು.

* **ಕೆಳಗಿನವುಗಳಲ್ಲಿ ಯಾವುದೇ ಒಂದು ವಿಷಯದ ಕುರಿತು ೫೦ ರಿಂದ ೬೦ ಶಬ್ದಗಳಲ್ಲಿ ನಿಬಂಧ ಬರೆಯಿರಿ.** **(1X6=6)**

46. ಪ್ರತಿಪಾದನೆ - 1

ವಿಷಯ - 3

ಭಾಷೆ - 1

ಪ್ರಭಾವ - 1

*** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆದರಿಸಿ ಪತ್ರ ಬರೆಯಿರಿ.**

**(1 x 6 = 6)**

47. ವಿಳಾಸ - 1

ಭಾಷೆ - 1

ಪ್ರಾರಂಭ - 1

ಆಶಯ - 2

ಮುಕ್ತಾಯ - 1

---

*** ಕೆಳಗಿನ ವಾಕ್ಯಗಳ ಸಹಾಯದಿಂದ ಒಂದು ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯತಲೆ ಬರಹ ನೀಡಿರಿ.** **(6)**

**48.** ಪ್ರತಿಪಾದನೆ - 1

ವಿಷಯ - 3

ಭಾಷೆ - 1

ತಲೆಬರಹ - 1

- **ಕೆಳಗಿನ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

**49.** ಪ್ರಸಿದ್ಧ ವಕೀಲರ ಹೆಸರು ವಿಶ್ವನಾಥದತ್ತ. (1)

50. ೧೮೬೩ ನೆಯ ಇಸ್ವಿ ಜನವರಿ ೧೨ನೇಯ ತಾರೀಖಿನ ದಿನ ವಿವೇಕಾನಂದರು ಜನಿಸಿದರು. (1)

51. ವಿವೇಕಾನಂದರ ಮೂಲ ಹೆಸರು ನರೇಂದ್ರ. (1)

52. ನರೇಂದ್ರನಿಗೆ ಮೊದಲು ಅಕ್ಷರಗಳನ್ನು ಹೇಳಿ ಕೊಟ್ಟವರು ಭುವನೇಶ್ವರಿದೇವಿ. (1)

53. ರಾಮಾಯಣ ಮಹಾಭಾರತದ ಶ್ಲೋಕಗಳನ್ನು ಚೆನ್ನಾಗಿ ಹೇಳುತ್ತಿದ್ದನು. (1)

*** ಈ ಕೆಳಗಿನ ಕವಿತೆಗಳ ಸರಳ ಅರ್ಥ ಬರೆಯಿರಿ.** (3)

5**4.** ಶಾಲೆಯಲ್ಲಿ ಕಲಿಸುವ ಪಾಠಗಳನ್ನು ಶ್ರದ್ಧೆಯಿಂದ ಓದುತ್ತಾ ಮತ್ತು ಬರೆಯುತ್ತಾ, ನಿಮ್ಮ ಸ್ನೇಹಿತರ ಬಳಗದಲ್ಲಿ ಎಲ್ಲರಿಗೂ ಒಂದು ಉತ್ತಮ ಆದರ್ಶ ಹಾಗೂ ಮಾದರಿಯಾಗಿ ರೂಪುಗೊಳ್ಳಬೇಕು. ಹಿರಿಯರೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಾ , ಅನಗತ್ಯವಾಗಿ ವಾದ ಮಾಡದೆ/ಮಾತಾಡದೆ ವಿಧೇಯರಾಗಿರುತ್ತಾ ನಿಮ್ಮ ಜ್ಞಾನ ಮತ್ತು ಸದ್ಗುಣಗಳಿಂದ ಈ ಸಂತೋಷದ ಜೀವನದಲ್ಲಿ ಉತ್ತಮ ಪ್ರತಿಭಾವಂತರಾಗಿ ಬೆಳಗಬೇಕು ಎಂಬುದೇ ಈ ಕವಿತೆಯ ಮುಖ್ಯ ಆಶಯವಾಗಿದೆ.

( ಅಥವಾ )

. ಸ್ವಚ್ಛವಾದ ಮೋಡಗಳಿಂದ ಆವೃತವಾದ ಆಕಾಶವೆಂಬ ತೋಟದಲ್ಲಿ ಆರಾಮವಾಗಿ ಮಲಗಿರುವ ಚಂದ್ರನನ್ನು, ತಂಪಾದ ಗಾಳಿಯು ಉಯ್ಯಾಲೆಯಂತೆ (ಜೋಕಾಲಿ) ತೂಗುತ್ತಾ ಮಲಗಿಸುತ್ತಿದೆ . ವಿಶಾಲವಾದ ಆಕಾಶದ ಮಡಿಲಿನಲ್ಲಿರುವ ಹಕ್ಕಿಗಳ ಗೂಡುಗಳಲ್ಲಿ, ಹಕ್ಕಿಗಳು ರಾತ್ರಿಯ ಪ್ರಶಾಂತ ವಾತಾವರಣದಲ್ಲಿ ಅತ್ಯಂತ ಸುಂದರವಾದ ಬಂಗಾರದಂತಹ ಕನಸುಗಳನ್ನು ಕಾಣುತ್ತಾ ನಿಶ್ಚಿಂತೆಯಾಗಿ ಮಲಗಿವೆ.

\#####################